ನಂ. 10. ತಾರೀಖು 6ನೇ ಅಕ್ಟೋಬರ್ 1887.

ಹುಣಸೂರು ಸಬ್ ರೆಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜುಗಳನ್ನ ಕ್ರಮವಾದ ವಾರಸ್‌ದಾರ್‌ರಾಗಲೀ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದ್ದಲ್ಲಿ 1877ನೇ ಇಸವಿ 3ನೇ ನಂಬರ್ ರೆಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶ ಪಡಿಸಲ್ಪಡುತ್ತೆ.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ಅಡಿಷ್ಟ್.	ದಸ್ತಾವೇಜು ಬರಸಿಕೊಂಡವನ ಹೆಸರು ಮತ್ತು ಅಡಿಷ್ಟ್.	ರಿಜಿಸ್ಟ್ರೇಷನ್ ಹಾಜರಾದ ತಾರೀಖು ಸಾಲಿಗೆ ಸೇರಿಸಿದ ಸಂ.	ರಿಜಿಸ್ಟ್ರೇಷನ್ ಸಾಲು ಗುರುತಿಸಿದ ತಾರೀಖು.	ಸ್ವಭಾವ ಮತ್ತು ಕಿಮ್ಮತ್ತು.
4ನೇ ಬುಕ್ಕು 2ನೇ ನಂಬರ್ 85—86ನೇ ಇಸವಿ	ಹುಣಸೂರು ತಾಲ್ಲೂಕು ಯಿಜೂರು ಗ್ರಾಮದಲ್ಲಿ ಇರುವ ಗುಡಗನಹಳ್ಳಿ ಬಲಗೈ ಕಾಳ	ಹುಣಸೂರು ತಾಲ್ಲೂಕು ಯಿಜೂರು ಗ್ರಾಮದಲ್ಲಿರುವ ಕೆಲ್ಸೇಗಾರ ಬಸವೇಗೌಡನ ಮಗ ಬೋರೇಗವುಡ	15—7—85	31—7—85	ಜೇತದ ಕರಾರು 50 ರೂಪಾಯಿ ಮತ್ತು ಬಂದುಖಿಂಡಗ ರಾಗಿ ಬಂದುಖಿಂಡಗ ಭತ್ತಾ ಸಹ ಮದಗಡ ತೆಗದುಕೊಂಡು ಯಿರುವಹಾಗೂ ಮತ್ತು ಬರಸಿಕೊಂಡವನ ಮನೇಲಿ ಯರಡುಹೊತ್ತು ವ್ಯೂಟೂ ಮಾಡಿಕೊಂಡು ಹೊದಿಯುವದಕ್ಕೆ ಕಂಬಳಿಯೂ ವೊಡುವದಕ್ಕೆ ಬಟ್ಟೆಯೂ ಹೆಂಡರ ಮಕ್ಕಳ ಜೀವನಕ್ಕೆ ವರುಷ ಬಂದಕ್ಕೆ ಯರಡುಖಿಂಡಗ ರಾಗಿ ತೆಗದುಕೊಂಡು ಮೇಲ್ಕಂಡ ಅಸಲ್ ಹಣಕ್ಕೆ ಶೇಕಡಾ ಯರಡು ರೂಪಾಯಿ ಮೇರೆ ಆಗುವ ಬಡ್ಡಿ 12 ರೂಪಾಯಿ ಸಂಬಳಕ್ಕೆ ಒಪ್ಪಿ 12 ವರುಷ ಪರಿಯಂತ್ರ ಜೇತಾ ಮಾಡುವದಾಗಿ.
4ನೇ ಬುಕ್ಕು 4ನೇ ನಂಬರ್ 1885—86	ಸದರೀ ಗ್ರಾಮದಲ್ಲಿರುವ ಬಲಗೈ ಜಾತಿ ಲಕ್ಕನ ಈರಾ	ಡಿಟೋ	ಡಿಟೋ	ಡಿಟೋ	ಡಿಟೋ
4ನೇ ಬುಕ್ಕು 3ನೇ ನಂಬರ್ 1885—86	ಸದರೀ ಗ್ರಾಮದ ಬಲಗೈ ಜಾತಿ ದಂಡನವಗ ದಂಡಾ	ಡಿಟೋ	ಡಿಟೊ	ಡಿಟೋ	ಜೇತದ ಕರಾರು 60 ರೂಪಾಯಿ ಮತ್ತು ಬಂದುಖಿಂಡಗಭತ್ತಾ ಮತ್ತು ಬಂದುಖಿಂಡಗ ರಾಗಿ ಸಹ ಮದಗಡ ತೆಗದುಕೊಂಡು ಯಿರುವಹಾಗೂ ಬರಸಿಕೊಂಡವನಲ್ಲಿ ಅಶನಾ ಆಚ್ಛಾದನ ತೆಗದುಕೊಂಡು 10 ವರುಷ ಪರಿಯಂತ್ರ ಅಸಲ್ ಹಣ ಬಡ್ಡಿಗಾಗಿ ನೌಕರೀ ಮಾಡುವದಾಗಿಯು ಹೆಂಡತಿ ಜೀವನಕ್ಕೆ ಸಾಲೆಸಾಲ್ 10 ವರುಷ ಪರಿಯಂತ್ರ 2 ಖಿಂಡಗ ರಾಗಿ ಕೊಡಬೇಕೆಂದು.

ಟಿ. ಆನಂದರಾವ್,
ರೆಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 7ನೇ ಅಕ್ಟೋಬರ್ 1887.

ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ಜೇವಾರಸ್ ದಸ್ತಾವೇಜುಗಳನ್ನು ಕ್ರಮ ಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ:-

ದಸ್ತಾವೇಜಿನ ನಂಬರ್.	ರಿಜಿಸ್ಟ್ರೇಷ್ಗೆ ಹಾಜರ್ಪಡಿಸಿದ ತಾರೀಖು.	ಬರದುಕೊಟ್ಟವರು ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
11	21 4 83	21 4 83	21 4 83	ಚಿಕ್ಕನಾಯನಹಳ್ಳಿ ಬಲಗೈ ಲಾಳಿಮಗ ಲಕ್ಕ	ಚಿಕ್ಕನಾಯಕನಹಳ್ಳಿ ಬಂಗವೇಗೌಡ	(80) ರೂಪಾಯಿನ ಕ್ರಯಪತ್ರ.
1883—84						
79	27 9 83	27 9 83	27 9 83	ಹೊಂಗಡಹಳ್ಳದ ಬಲಗೈ ಬೆಂಬ್ಬನಹಳ್ಳಿ ತಿಪ್ಪನಮಕ್ಕಳು ದೊಂಣೆಮಲ್ಲ ಮತ್ತು ಕೆಂಚ ಸಹ	ಹೊಂಗಡಹಳ್ಳದ ಮಂಜೇಗೌಡ	(100) ರೂಪಾಯಿನ ಕ್ರಯಪತ್ರ.
1883—84						
14	11 4 84	11 4 84	12 4 84	ಬೈಕೆರೆ ಮಹಂತಗೌಡನ ಮಕ್ಕಳು ನಂಜೇಗೌಡ 1, ಅಂಣೇಗೌಡ 2, ಚಿವೇಗೌಡ 3, ಕೊಮಾರಗೌಡ 4 ವುರಫ಼ ಪುಟ್ಟಸಾಮಿಗೌಡ ಸಹ	ಬೈಕೆರೆ ಮಹಂತಗೌಡನ ಮಕ್ಕಳು ಅಂಣೇಗವುಡ 1 ಚಿವೇಗೌಡ 2, ಕೊಮಾರಗೌಡ 3 ವುರಫ಼ ಪುಟ್ಟಸಾಮಿಗೌಡ ನಂಜೇಗೌಡ 4 ಸಹ	(150) ರೂಪಾಯಿ ಕ್ರಯಬಾಳತಕ್ಕ ಸ್ವತ್ತುಗಳ ಬಾಬತು ಪಾಲು ಪಾರೀಖು.
42	26 6 84	26 6 84	26 6 84	ಮಂಜರಾಬಾದ್ ತಾಲ್ಲೂಕು ಮಾವಿನಕೋಲು ಗ್ರಾಮದಲ್ಲಿರುವ ಬಸವೇಗೌಡನ ಮಗ ನಂಜೇಗೌಡ	ಹಾಸನ ತಾಲ್ಲೂಕು ಬಾಂವಸವಳ್ಳಿ ಗ್ರಾಮದ ಈರೇಗವುಡನ ಮಗ ನಿವಾಣಿಗವುಡ	(50) ರೂಪಾಯಿನ ಭೋಗ್ಯಪತ್ರ.
1884—85						

ಪಿ. ಎಸ್. ಪೂರ್ಣಯ್ಯ,
ರೆಜಿಸ್ಟ್ರಾರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜ್ಯರವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 894.

ತುಮಕೂರು ಡಿಸ್ಟ್ರಿಕ್ಟ್ ಗುಬ್ಬೀ ತಾಲ್ಲೂಕು ಕಡಬದಲ್ಲಿದ್ದ ಮೃತಪಟ್ಟ ಜಯರಾಮಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಡಿಟೋ ಕಡಬದಲ್ಲಿರುವ ಗರುಡಾಚಾರ್ರು, ಮೃತಪಟ್ಟ ಸದರೀ ಜಯರಾಮಯ್ಯನಿಗೆ ಭಾವಮೈದ ಆಗಬೇಕೆಂಬ ಹಕ್ಕುದಾರೀ ಮೇಲೆ ಕಡಬ ಸ್ಥಳದ ಗರುಡಾಚಾರ್ಯನು ಕಡಬದ ವಾಸಸ್ಥನಾಗಿ ಮೃತಪಟ್ಟ ಜಯರಾಮಯ್ಯನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗರುಡಾಚಾರ್ಯನ ಅರ್ಜೀಯನ್ನು 1887ನೇ ಇಸವಿ ನವೆಂಬರ್ ತಿಂಗಳು ತಾರೀಖು 4ರಲ್ಲು ಕೇಳಿ ಸರಟಿ ಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜಯರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.